ಆ) ಹಡಗಲಿ ಬಸ್ ನಿಲ್ದಾಣ ಹಾಗೂ ಡಿಪೋಗಳನ್ನು ಸ್ಥಾಪಿಸುವಲ್ಲಿ ತಗುಲಿದ ಖರ್ಚು ಎಷ್ಟು?

ಇ) ಎಲ್ಲಾ ತಾಲ್ಲೂಕು ಕೇಂದ್ರಗಳಿಗಿಂತ ಬಳ್ಳಾರಿ ಜಿಲ್ಲೆಯಲ್ಲಿ ಹಡಗಲಿಯಲ್ಲೇ ಪ್ರಥಮವಾಗಿ ಸ್ಥಾಪಿಸಲು ಕಾರಣವೇನು ?

ಈ) ತಾಲ್ಲೂಕು ಕೇಂದ್ರಗಳಲ್ಲಿ ಬಸ್ ನಿಲ್ದಾಣ ಹಾಗೂ ಡಿಪೋಗಳನ್ನು ಸ್ಥಾಪನೆ ಮಾಡುವಾಗ ಸರ್ಕಾರ ಅನುಸರಿಸುವ ನೀತಿ ನಿಯಮಗಳೇನು ?

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಅಂದಾಜು ವೆಚ್ಚವು ೮೮ ಲಕ್ಷ ರೂ.ಗಳು. ಸೇರಿರುತ್ತದೆ. ಮಾಡಲಾಗುವುದು.

ಆ) ಬಸ್ ನಿಲ್ದಾಣಕ್ಕೆ ೮೮ ಲಕ್ಷ ರೂ.ಗಳು ಹಾಗೂ ಕವರ್ಡ್ ಆಕಾಮಡೇಶನ್ ಮಾಡಲು ೫೫ ಲಕ್ಷ ರೂ.ಗಳು. ಡಿಪೋ ಕೆಲಸಕ್ಕೆ ೨೬ ಲಕ್ಷ ರೂ.ಗಳು.

ಇ) ಸುಮಾರು ೬೦ ಕಿ. ಮೀ. ದೂರದವರೆಗೆ ಬೇರೆ ಯಾವ ಡಿಪೋ ಇಲ್ಲವಾದುದರಿಂದ, ಹಡಗಲಿಯಲ್ಲಿ ಡಿಪೋ ನಿರ್ಮಾಣದ ಅವಶ್ಯಕತೆ ಕಂಡು ಬಂದಿತು.

ಈ) ಸಂಚಾರದ ಒತ್ತಡ ಹಾಗೂ ಅವಶ್ಯಕತೆಗೆ ಅನುಗುಣವಾಗಿ ತಾಲ್ಲೂಕು ಕೇಂದ್ರಗಳಲ್ಲಿ ಬಸ್ ನಿಲ್ದಾಣ ಹಾಗೂ ಡಿಪೋ ಸ್ಥಾಪನೆ ಮಾಡಲಾಗುವುದು.

ಗುಲ್ಬರ್ಗಾ ವಿಭಾಗದ ಕ.ರಾ.ರ.ಸಾ. ಸಂಸ್ಥೆ ವಿಭಾಗ ನಿಯಂತ್ರಕರಿಂದ ವರದಿ

೮೫೭. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಉಪಾಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ವಿಭಾಗ ನಿಯಂತ್ರಣಾಧಿಕಾರಿ, ಗುಲ್ಬರ್ಗಾ ವಿಭಾಗ, ಗುಲ್ಬರ್ಗಾ. ಇವರಿಗೆ (೧) ಬೀದರ್–ನಾರಾಯಣ ಪೇಟೆ – ಬೀದರ್ ಮಾರ್ಗ ಮತ್ತು ಜಂಜೋಳಿ, ಸೇಡಂ, ಗುರುಮಿಟ್ಕಲ್ ನಾರಾಯಣಪೇಟೆ, ಯಾದಗಿರಿ, ಶಹಪ್ಪುರ, ಗುಲ್ಬರ್ಗ ಮತ್ತು ಗುಲ್ಬರ್ಗ – ನಾರಾಯಣಪೇಟೆ – ಗುಲ್ಬರ್ಗ – ಸೇಡಂ, ಗುರುಮಿಟ್ಕಲ್ – ನಾರಾಯಣಪೇಟೆ – ಯಾದಗಿರ್ – ಶಹಪುರ್ ಗುಲ್ಬರ್ಗಗಳಿಗೆ ಹೊಸ ಮಾರ್ಗಗಳನ್ನು ಓಡಿಸಲು ವರದಿ ಕಳುಹಿಸಲು ಆದೇಶಿಸಿದ್ದಾರೆಯೇ ?

ಆ) ವಿಭಾಗ ನಿಯಂತ್ರಣಾಧಿಕಾರಿ, ಗುಲ್ಬರ್ಗ ಇವರು ಸರ್ವೆ ಮಾಡಿ ವರದಿಯನ್ನು ಸಲ್ಲಿಸಿದ್ದಾರೆಯೇ ?

ಇ) ಇಲ್ಲದಿದ್ದರೆ, ಕಾರಣವೇನು ?

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಇಲ್ಲ ಸೂಚಿಸಿರುವ ಹೊಸ ಮಾರ್ಗಗಳು ಆಂಧ್ರ ಪ್ರದೇಶ ರಾಜ್ಯದೊಳಗಿನ ಅಂತರ ರಾಜ್ಯ ಒಪ್ಪಂದದ ವ್ಯಾಪ್ತಿಯಲ್ಲಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಪ್ರಯಾಣಿಕರ ಟಿಕೆಟ್ಟಿನ ಮೇಲೆ ವಿಮಾ ಯೋಜನೆ

೮೫೮. ಶ್ರೀ ಐ. ಬಿ. ಶಂಕರ್ (ಚಿಕ್ಕಮಂಗಳೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಬಸ್ಸುಗಳು ಕಾಲಕಾಲಕ್ಕೆ ಸರಿಯಾಗಿ ಬೇಳೆಯನ್ನು ಅನುಸರಿಸದೆ ಓಡಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿರುವುದೇ ? ಹಾಗಿದ್ದಲ್ಲಿ ಈ ಅವ್ಯವಸ್ಥೆಗೆ ಕಾರಣವೇನು ?

ಇ) ತಡೆರಹಿತ ವಾಹನಗಳು ಶಿಥಿಲವಾಗಿದ್ದರೂ ಓಡಿಸುತ್ತಿರುವುದರ ಉದ್ದೇಶವೇನು ಇನ್ನು ಮುಂದಾದರೂ ಹೊಸ ಬಸ್ಸುಗಳನ್ನು ಹಾಕುವ ವ್ಯವಸ್ಥೆ ಮಾಡಲಾಗುವುದೇ ?

ಇ) ಸಾರಿಗೆ ಮಂತ್ರಿಗಳು ಸರ್ಕಾರಿ ಬಸ್‌ನ ಪ್ರಯಾಣಿಕರ ಟಿಕೆಟ್ಟಿನ ಮೇಲೆ ವಿಮಾ ಯೋಜನೆ ಮಾಡಿಸಿರುವ ಬಗ್ಗೆ ಕೇಳಿದ ಪ್ರಶ್ನೆಯನ್ನು ಸ್ವಾಗತಿಸಿ ಕಾರ್ಯರೂಪಕ್ಕೆ ತರುವುದಾಗಿ ಭರವಸೆ ನೀಡಿದ್ದರು. ಈ ವಿಮಾ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಇರುವ ತೊಂದರೆ ಯಾದರೂ ಏನು ? ಹಾಗೂ ಈ ಬಗ್ಗೆ ಸಾಧಿಸಲಾದ ಪ್ರಗತಿಯೇನು ?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು),—

ಅ) ಇಲ್ಲ.

ಆ) ಸಂಸ್ಥೆಯು ತಡೆ ರಹಿತ ಸೇವೆಗಳಿಗೆ ಶಿಥಿಲಗೊಂಡ ವಾಹನಗಳನ್ನು ಓಡಿಸುತ್ತಿಲ್ಲ. ತಡೆ ರಹಿತ ಅನುಸೂಚಿಗಳಿಗೆ ಖಾಯಂ ಆಗಿ ಜೊಸ ವಾಹನಗಳನ್ನು ನಿಯೋಜಿಸಲಾಗುತ್ತಿದೆ.

ಇ) ಸದರೀ ಯೋಜನೆಯ ಬಗ್ಗೆ ವಿಮಾ ಕಂಪೆನಿಗಳೊಡನೆ ಪತ್ರ ವ್ಯವಹಾರ ನಡೆಸಲಾಗಿದೆ. ಈ ಕಂಪನಿಗಳಿಂದ ಉತ್ತರವನ್ನು ನಿರೀಕ್ಷಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಂಗಳು

೯೧೦. ಶ್ರೀ ಎ. ಶಿವಣ್ಣ (ಹೆಗ್ಗಡದೇವನಕೋಟೆ). —ಮಾನ್ಯ ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ–ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳೆಷ್ಟು ? ಪ್ರೀ ಮೆಟ್ರಿಕ್ ಮತ್ತು ಪದವಿಪೂರ್ವ ವಿದ್ಯಾರ್ಥಿನಿಲಯಗಳ ವಿವರ ನೀಡುವುದು ?

ಆ) ೧೯೮೬–೮೭, ೮೭–೮೮, ೮೮–೮೯ ರಲ್ಲಿ ವಿಧ್ಯಾರ್ಥಿಗಳ ಸಂಖ್ಯೆ ಎಷ್ಟಿತ್ತು ಎಂಬ ವಿವರ ನೀಡುವುದು ?

ಇ) ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ತೆರೆಯಲಾಗಿರುವ ವಿದ್ಯಾರ್ಥಿನಿಲಯಗಳೆಷ್ಟು ?

ಈ) ೧೯೮೩–೮೪ಕ್ಕೆ ಇದ್ದಂತಹ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? ಇಲ್ಲಿಯವರೆಗೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದೆಯೇ ? ಹೆಚ್ಚಿದಲ್ಲಿ ಎಷ್ಟು ?

ಉ) ಹೆಚ್ಚಿನ ಸಂಖ್ಯೆಗನುಗುಣವಾಗಿ ವಿದ್ಯಾರ್ಥಿನಿಲಯಗಳನ್ನು ತೆರೆಯಾಲಾಗಿದೆಯೇ ? ಹಾಗಿದ್ದಲ್ಲಿ ಎಷ್ಟು ?

ಊ) ವಿದ್ಯಾರ್ಥಿಗಳಿಗೆ ನೀಡುತ್ತಿರುವ ಮಾಸಿಕ ಸಹಾಯಧನವನ್ನು ಹೆಚ್ಚಿಸುವ ಕ್ರಮ ಕೈಗೊಳ್ಳಲಾಗಿದೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಮಾಜ ಕಲ್ಯಾಣ ಸಚಿವರು).—

ಅ) ೧. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಂಗಳು ೯೨೪

ಮೆಟ್ರಿಕ್ ನಂತರದ ಕಾಲೇಜು ಹಾಸ್ಟೆಲ್ ೧೩೨

ಪ್ರೀ ಮೆಟ್ರಿಕ್

೧. ಸರ್ಕಾರಿ ೬೫೫

೨. ಖಾಸಗಿ (ಅನುದಾನಿತ) ೨೬೯

ಮೆಟ್ರಿಕ್ ನಂತರದ ಕಾಲೇಜು ಹಾಸ್ಟೆಲ್‌ಗಳು

೧. ಸರ್ಕಾರಿ ೯೮

೨. ಖಾಸಗಿ ೩೪

ಆ)

	೧೯೮೬–೮೭	೧೯೮೭–೮೮	೧೯೮೮–೮೯
ಮಾಧ್ಯಮಿಕ ಶಾಲೆ	೪೨೫೨೪೩	೪೬೨೨೬೬	೫೧೪೪೫೧೧
ಪ್ರೌಢಶಾಲೆ	೧೭೨೦೩೦	೧೮೮೫೬೧೧	೨೦೮೯೮೨